## ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಅಂಧ ಮತ್ತು ಅಂಗವಿಕಲ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುತ್ತಿರುವ ವಾಹನ ಭತ್ಯೆ ದರಗಳ ಪರಿಷ್ಕರಣೆ.

**ಓದಲಾಗಿದೆ:**
1. ದಿನಾಂಕ 14.02.1979ರ ಸರ್ಕಾರಿ ಆದೇಶ ಸಂಖ್ಯೆ: ಆಇ 1 ಎಸ್ಆರ್‌ಪಿ 79
2. ದಿನಾಂಕ 17.07.1979ರ ಸರ್ಕಾರಿ ಆದೇಶ ಸಂಖ್ಯೆ: ಆಇ 1 ಎಸ್ಆರ್‌ಪಿ 79
3. ದಿನಾಂಕ 14.08.2008ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 31 ಎಸ್ಆರ್‌ಪಿ 2007(I)
4. ದಿನಾಂಕ 16.02.2013ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್ಆರ್‌ಪಿ 2012(X)

**ಪ್ರಸ್ತಾವನೆ:**

Kiran Raghupathi

ಅಂಧ ಮತ್ತು ಅಂಗವಿಕಲ ರಾಜ್ಯ ಸರ್ಕಾರಿ ನೌಕರರು, ಅವರ ಅಂಧತ್ವ ಮತ್ತು ದೈಹಿಕ ಅಂಗವೈಕಲ್ಯತೆಯ (ದೈಹಿಕ ನ್ಯೂನ್ಯತೆ) ಕಾರಣಗಳಿಂದಾಗಿ ಕಛೇರಿಗೆ ಬಂದು ಹೋಗಲು ಇತರರ ಸಹಕಾರ ಮತ್ತು ಅವಲಂಬನೆಯಿಂದಾಗಿ ಅವರಿಗೆ ಉಂಟಾಗುವ ಅಧಿಕ ಆರ್ಥಿಕ ಹೊರೆಯನ್ನು ಸ್ವಲ್ಪ ಮಟ್ಟಿಗೆ ತಗ್ಗಿಸಲು ರಾಜ್ಯ ಸರ್ಕಾರವು ಮೇಲೆ (1)ರಲ್ಲಿ ಓದಲಾದ ದಿನಾಂಕ 14.02.1979ರ ಆದೇಶದಲ್ಲಿ ವಾಹನ ಭತ್ಯೆಯನ್ನು ಮಂಜೂರು ಮಾಡಲು ಅವಕಾಶಗಳನ್ನು ಕಲ್ಪಿಸಲಾಗಿರುತ್ತದೆ. ಈ ಸೌಲಭ್ಯವನ್ನು ಪಡೆಯಲು ಸದರಿ ನೌಕರರು ಮೇಲೆ (2)ರಲ್ಲಿ ಓದಲಾದ ದಿನಾಂಕ 17.07.1979ರ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ ನಮೂನೆಯಲ್ಲಿ ವೈದ್ಯಕೀಯ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಬೇಕಾಗಿರುತ್ತದೆ. ಸದರಿ ಭತ್ಯೆಯನ್ನು ಸರ್ಕಾರವು ನಿಗದಿಪಡಿಸಿದ ಮಿತಿಗೊಳಪಟ್ಟು ಮಂಜೂರು ಮಾಡಲಾಗುತ್ತಿತ್ತು.

ಅಂಧ ಮತ್ತು ಅಂಗವಿಕಲ ರಾಜ್ಯ ಸರ್ಕಾರಿ ನೌಕರರಿಗೆ ಮಂಜೂರು ಮಾಡಲಾಗಿದ್ದ ಈ ಮೇಲಿನ ವಾಹನ ಭತ್ಯೆಯ ದರಗಳನ್ನು, ಕಾಲದಿಂದ ಕಾಲಕ್ಕೆ ಪರಿಷ್ಕರಿಸಿಕೊಂಡು ಬರಲಾಗಿರುತ್ತದೆ.

ಅಂಧ ಮತ್ತು ಅಂಗವಿಕಲ (ಚಲನವಲನ ವೈಕಲ್ಯ ಹೊಂದಿರುವ) ರಾಜ್ಯ ಸರ್ಕಾರಿ ನೌಕರರು ಕಛೇರಿಗೆ ಬಂದು ಹೋಗಲು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಗಣಿಸಿದ 2011ರ ಅಧಿಕಾರಿ ವೇತನ ಸಮಿತಿಯು ಸದರಿ ನೌಕರರಿಗೆ ಮಂಜೂರು ಮಾಡಲಾಗುತ್ತಿದ್ದ ವಾಹನ ಭತ್ಯೆಯ ದರವನ್ನು ಯಾವುದೇ ಗರಿಷ್ಠ ಮಿತಿ ಇಲ್ಲದೇ ಮೂಲ ವೇತನದ ಶೇ.6ರ ದರದಲ್ಲಿ ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಿತ್ತು. ಅಧಿಕಾರಿ ವೇತನ ಸಮಿತಿಯ ಶಿಫಾರಸ್ಸಿನಂತೆ ಮೇಲೆ(4)ರಲ್ಲಿ ಓದಲಾದ ದಿನಾಂಕ 16.02.2013ರಲ್ಲಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

ಪ್ರಸ್ತುತ ವಿಶೇಷ ಚೇತನ ಸಿಬ್ಬಂದಿಗಳು ಕಛೇರಿಗೆ ಹೋಗಿ ಬರುವ ವೆಚ್ಚವನ್ನು ಭರಿಸಲು ಮೂಲ ವೇತನದ ಶೇ.6ರಷ್ಟು ವಾಹನ ಭತ್ಯೆಯನ್ನು ಮಂಜೂರು ಮಾಡುವ ಪದ್ಧತಿಯನ್ನು 6ನೇ ರಾಜ್ಯ ವೇತನ ಆಯೋಗವು ಪರಿಶೀಲಿಸಿ ಈ ಸೌಲಭ್ಯವನ್ನು ಮುಂದುವರೆಸಲು ಶಿಫಾರಸ್ಸು ಮಾಡಿರುತ್ತದೆ.

6ನೇ ರಾಜ್ಯ ವೇತನ ಆಯೋಗದ ಈ ಶಿಫಾರಸ್ಸನ್ನು ಸರ್ಕಾರವು ಒಪ್ಪಿರುತ್ತದೆ ಮತ್ತು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 24 ಎಸ್‌ಆರ್‌ಪಿ 2018(VII)**
**ಬೆಂಗಳೂರು, ದಿನಾಂಕ 11ನೇ ಜನವರಿ 2019**

Kiran Raghapathi

ರಾಜ್ಯ ಸರ್ಕಾರದ ವಿಶೇಷ ಚೇತನ ಸಿಬ್ಬಂದಿಗಳು ಅಂದರೆ, ಅಂಧ ಮತ್ತು ಅಂಗವಿಕಲ (ಚಲನವಲನ ವೈಕಲ್ಯತೆ) ರಾಜ್ಯ ಸರ್ಕಾರಿ ನೌಕರರಿಗೆ ಹಾಲಿ ನೀಡುತ್ತಿರುವ ವಾಹನ ಭತ್ಯೆಯ ದರವನ್ನು 2018ರ ಪರಿಷ್ಕೃತ ವೇತನ ಶ್ರೇಣಿಯಲ್ಲಿನ ಮೂಲ ವೇತನದ **ಶೇ.6**ರ ದರದಲ್ಲಿ ಮಾಹೆಯಾನ ಯಾವುದೇ ಗರಿಷ್ಠ ಮಿತಿಯಿಲ್ಲದೆ **1ನೇ ಜನವರಿ 2019**ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ಸರ್ಕಾರವು ಹರ್ಷಿಸುತ್ತದೆ.

2. ಈ ಸೌಲಭ್ಯದ ಉದ್ದೇಶಕ್ಕಾಗಿ ಅಂಧತ್ವ ಎಂದರೆ The Rights of Persons with Disabilities Act, 2016 ರ ಅನುಬಂಧದ ಕಂಡಿಕೆ 1(B) ರಲ್ಲಿ ವ್ಯಾಖ್ಯಾನಿಸಿರುವಂತೆ ಅರ್ಥೈಸಿಕೊಳ್ಳತಕ್ಕದ್ದು.

3. ಈ ಸೌಲಭ್ಯದ ಉದ್ದೇಶಕ್ಕಾಗಿ ದಿನಾಂಕ 14.02.1979ರ ಸರ್ಕಾರಿ ಆದೇಶ ಸಂಖ್ಯೆ: ಆಇ 1 ಎಸ್‌ಆರ್‌ಪಿ 79 ರಲ್ಲಿ ವಿಷದಪಡಿಸಿರುವಂತೆ ಕನಿಷ್ಠ ಶೇಕಡ 40ರಷ್ಟು ಅಂಗವೈಕಲ್ಯತೆ ಹೊಂದಿರತಕ್ಕದ್ದು.

4. ಈ ಸೌಲಭ್ಯವನ್ನು ಪಡೆಯಲು ಸಲ್ಲಿಸಬೇಕಾದ ವೈದ್ಯಕೀಯ ಪ್ರಮಾಣ ಪತ್ರದ ನಮೂನೆಯನ್ನು ಈ ಆದೇಶದ ಅನುಬಂಧದಲ್ಲಿ ಲಗತ್ತಿಸಿದೆ.

5. ಈ ಭತ್ಯೆಯನ್ನು ಮಂಜೂರು ಮಾಡಲು ವಿಧಿಸಿರುವ ಇತರೆ ಷರತ್ತುಗಳು ಮುಂದುವರೆದು ಅನ್ವಯಿಸುತ್ತವೆ ಹಾಗೂ ಭತ್ಯೆಯ ಲಭ್ಯತೆಯೂ ಸಹ ಸೇವಾ ನಿಯಮಗಳ ನಿಬಂಧನೆಗೊಳಪಟ್ಟಿರುತ್ತದೆ.

6. ಈ ಭತ್ಯೆಯನ್ನು ಮಂಜೂರು ಮಾಡಲು ಇಲಾಖಾ ಮುಖ್ಯಸ್ಥರು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ.

7. ಈ ಆದೇಶಗಳು ಸರ್ಕಾರದ ಅನುದಾನಿತ ಶಿಕ್ಷಣ ಸಂಸ್ಥೆಗಳ ಅಂಧ ಮತ್ತು ಅಂಗವಿಕಲ ನೌಕರರಿಗೂ ಸಹ ಅನ್ವಯಿಸುತ್ತದೆ.

8. ದಿನಾಂಕ 16.02.2013ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(X)ನ್ನು ರದ್ದುಪಡಿಸಿ ಈ ಆದೇಶ ಹೊರಡಿಸಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಡಿ.ಎಸ್.ಜೋಗೋಜೆ)**
**ಸರ್ಕಾರದ ಉಪ ಕಾರ್ಯದರ್ಶಿ**
**ಆರ್ಥಿಕ ಇಲಾಖೆ (ಸೇವೆಗಳು–2)**

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ANNEXURE to G.O. No.FD 24 SRP 2018(VII ) dated 11th January 2019**

**Form**

(Applicable to Orthopaedically Handicapped /Blind Government employees)

Orthopaedics/ Ophthalmology Department, Government Hospital…………

Sl. No.

I hereby certify that I have examined Shri/Smt…………………………………………………. who is said to have been employed in ……………………………………………………… …………….. as (designation) ……………………………………………………… and whose signature is attested by me, is a candidate for sanction of conveyance allowance as stipulated in G.O.No. FD 1 SRP 79 dated 14th February 1979 read with G.O. dated: ---- 01.2019. After the detailed examination, I find that he/she has got the following permanent/partial disability of ………………………………………….......... ………………… ……………/ total blindness (both eyes)/ blindness* as defined in para 1(B) of the **SCHEDULE TO THE RIGHTS OF PERSONS WITH DISABILITIES ACT, 2016**

(1)

(2)

(3)

(4)

In conclusion, I am of the opinion that the total permanent disability is up to ……………………………………….. percentage of both upper and lower extremities/both eyes and requires physical assistance to comute to work place. He/she is eligible / not eligible for the conveyance allowance as per G.O. No. FD 1 SRP 79 dated 14th February 1979 read with G.O. dated: 11.01.2019.

Specimen signature of the Candidate or
Left thumb impression.

Signature and designation of the Head of the
Department of Orthopaedics/ Ophthalmology,
Government Hospital.

Date:

Place:

* Strike out whichever is not applicable.

Kiran Raghupathi

**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ವಿಕಲ ಚೇತನ (ಅಂಗವಿಕಲ) ರಾಜ್ಯ ಸರ್ಕಾರಿ ನೌಕರರು, ಮೋಟಾರುಚಾಲಿತ/ಯಾಂತ್ರಿಕ (ಮೆಕ್ಯಾನಿಕಲ್) ವಾಹನಗಳನ್ನು ಖರೀದಿಸಲು ನೀಡಲಾಗುತ್ತಿರುವ ಸಹಾಯಧನವನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:** ದಿನಾಂಕ 10.06.2013ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 12 ಎಸ್‌ಆರ್‌ಪಿ 2012(XI)

**ಪ್ರಸ್ತಾವನೆ:**

Kiran Raghupathi

2011ರ ಅಧಿಕಾರಿ ವೇತನ ಸಮಿತಿಯ ಶಿಫಾರಸ್ಸಿನಂತೆ, ಮೇಲೆ ಓದಲಾದ ದಿನಾಂಕ 10.06.2013ರ ಸರ್ಕಾರಿ ಆದೇಶದಲ್ಲಿ ಅಂಗವಿಕಲತೆಯುಳ್ಳ (ವಿಕಲ ಚೇತನ) ಸರ್ಕಾರಿ ನೌಕರರು ಕಛೇರಿಗೆ ಹೋಗಿ ಬರಲು ಬಳಸುವ ಮೋಟಾರು ಚಾಲಿತ/ಯಾಂತ್ರಿಕ (ಮೆಕಾನಿಕಲ್) ವಾಹನಗಳನ್ನು ಖರೀದಿಸಲು ಸಹಾಯವಾಗಲೆಂದು, ಅಂತಹ ನೌಕರರು ಖರೀದಿಸುವ ವಾಹನದ ಬೆಲೆಯ ಶೇ.25ರಷ್ಟನ್ನು ಗರಿಷ್ಠ ರೂ.25,000/–ಗಳ ಮಿತಿಗೊಳಪಟ್ಟು ಹಿಂಬರಿಸಲು ಆದೇಶವನ್ನು ಹೊರಡಿಸಲಾಗಿರುತ್ತದೆ. ಈ ಸೌಲಭ್ಯವು ವಿಶೇಷ ಚೇತನ ಸಿಬ್ಬಂದಿಗಳ ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಲಭ್ಯವಾಗತಕ್ಕದ್ದಾಗಿರುತ್ತದೆ.

ವಾಹನಗಳ ಬೆಲೆ ಏರಿಕೆಯನ್ನು ಗಮನದಲ್ಲಿರಿಸಿದ 6ನೇ ರಾಜ್ಯ ವೇತನ ಆಯೋಗವು ಯಾಂತ್ರೀಕೃತ/ಮೋಟಾರು ಚಾಲಿತ ವಾಹನಗಳ ಖರೀದಿಗೆ ಸರ್ಕಾರವು ಪ್ರಸ್ತುತ ನೀಡುತ್ತಿರುವ ವಾಹನದ ಬೆಲೆಯ ಶೇಕಡ 25ರಷ್ಟು ಸಹಾಯಧನವನ್ನು ಪರಿಷ್ಕರಿಸಲು ಶಿಫಾರಸ್ಸು ಮಾಡಿರುತ್ತದೆ.

6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸನ್ನು ಸರ್ಕಾರವು ಒಪ್ಪಿರುತ್ತದೆ ಮತ್ತು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 24 ಎಸ್‌ಆರ್‌ಪಿ 2018(VIII)**
**ಬೆಂಗಳೂರು, ದಿನಾಂಕ 11ನೇ ಜನವರಿ 2019**

ವಿಶೇಷ ಚೇತನ (ಅಂಗವೈಕಲ್ಯತೆ ಹೊಂದಿರುವ) ರಾಜ್ಯ ಸರ್ಕಾರಿ ನೌಕರರು ಖರೀದಿಸುವ ಮೋಟಾರು ಚಾಲಿತ/ಯಾಂತ್ರೀಕೃತ (ಮೆಕ್ಯಾನಿಕಲ್) ವಾಹನಗಳಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು ವಿಶೇಷ ವಾಹನದ ಬೆಲೆಯ ಶೇ.30ರಷ್ಟು ಗರಿಷ್ಠ ರೂ.40,000/–ಗಳ ಮಿತಿಗೊಳಪಟ್ಟು **1ನೇ ಜನವರಿ 2019** ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ಸರ್ಕಾರವು ಹರ್ಷಿಸುತ್ತದೆ. ಈ ಸೌಲಭ್ಯದ ಮಂಜೂರಾತಿಯು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳ ಪೂರೈಕೆಗೊಳಪಟ್ಟಿರುತ್ತದೆ.

..2

Kiran Raghupathi

(i) ಈ ಸೌಲಭ್ಯವು ಕನಿಷ್ಠ ಶೇ.40 ಮತ್ತು ಅದಕ್ಕೂ ಹೆಚ್ಚಿನ ಅಂಗವೈಕಲ್ಯತೆ (ಚಲನವಲನ ವೈಕಲ್ಯತೆ) ಹೊಂದಿರುವ ವಿಶೇಷ ಚೇತನ ಸಿಬ್ಬಂದಿಗಳಿಗೆ ಮಾತ್ರ ಲಭ್ಯವಾಗತಕ್ಕದ್ದು.

(ii) ವಿಶೇಷ ಚೇತನ ಸಿಬ್ಬಂದಿಗಳು ಅವರ ಚಲನವಲನ ವೈಕಲ್ಯತೆಯ ದೃಢೀಕರಣದ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು.

(iii) ಈ ಉದ್ದೇಶಕ್ಕಾಗಿ ಖರೀದಿಸುವ ವಿಶೇಷ ವಾಹನದ ಬಿಲ್ಲನ್ನು ಇಲಾಖಾ ಮುಖ್ಯಸ್ಥರಿಗೆ ಸಲ್ಲಿಸತಕ್ಕದ್ದು.

(iv) ಈ ಸೌಲಭ್ಯವು ಸೇವೆಯಲ್ಲಿ ಒಂದು ಬಾರಿ ಮಾತ್ರ ಲಭ್ಯವಾಗತಕ್ಕದ್ದು. ಈ ಮೊದಲು ಈ ಸೌಲಭ್ಯವನ್ನು ಪಡೆದವರು ಪರಿಷ್ಕೃತ ದರದಲ್ಲಿ ಈ ಸೌಲಭ್ಯವನ್ನು ಪುನ: ಪಡೆಯಲು ಅರ್ಹರಿರುವುದಿಲ್ಲ.

2. ಈ ಸೌಲಭ್ಯವನ್ನು ಮಂಜೂರು ಮಾಡಲು ನೇಮಕಾತಿ ಪ್ರಾಧಿಕಾರವು ಸಕ್ಷಮ ಪ್ರಾಧಿಕಾರಿಯಾಗಿರುತ್ತದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಮತ್ತು ಅವರ ಹೆಸರಿನಲ್ಲಿ**

**(ಡಿ.ಎಸ್.ಜೋಗೋಜಿ)**
**ಸರ್ಕಾರದ ಉಪ ಕಾರ್ಯದರ್ಶಿ**
**ಆರ್ಥಿಕ ಇಲಾಖೆ (ಸೇವೆಗಳು-2)**

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
4. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
5. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, (ಪಿ.ಬಿ. ನಂ.5398) ಬೆಂಗಳೂರು.
6. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್‌ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.

..3